**OS No**.300/2022

**DW**-4 (**ಮಾಲತಿ ಮುಚಖಂಡಿ**)

**ದಿನಾಂಕಃ** 30-08-2025 **ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಟಿ ಆರ್ ಕೆ ವಕೀಲರಿಂದ, ಪ್ರತಿವಾದಿ ಪರವಾಗಿ:**

ನಮ್ಮ ತಂದೆ ಶಿವರಾಯಪ್ಪ ಬಸಪ್ಪ ಜಮ್ಮನಕಟ್ಟಿರವರು ದಿಃ **24.03.2001** ರಂದು ಮೃತಪಟ್ಟಿರುತ್ತಾರೆ. ನಮ್ಮ ತಂದೆ ಬಸವೇಶ್ವರ ಇಂಜನಿಯರಿಂಗ ಕಾಲೇಜಿನಲ್ಲಿ **carpenter** ಕೆಲಸ ಮಾಡುತ್ತಿದ್ದರು. ನಮ್ಮ ತಂದೆ ನಿವೃತ್ತಿ ಹೊಂದಿದ ನಂತರ ಅವರಿಗೆ ಪಿಂಚಣಿ ಹಣ ಬರುತ್ತಿತ್ತು.

ನಮ್ಮ ತಂದೆ ಹೆಸರಿನಲ್ಲಿ ಜಮೀನು ಹಾಗೂ ಮನೆ ಆಸ್ತಿಗಳು ಇದ್ದವು. ನಮ್ಮ ತಂದೆ ಹೆಸರಿನಲ್ಲಿ ಜಮೀನು ಸರ್ವೆ ನಂ. **314/2, 315/2, 457/2** ರಲ್ಲಿ ಒಟ್ಟು ವಿಸ್ತೀರ್ಣ **4** ಎಕರೆ **23** ಗುಂಟೆ ಜಮೀನು ಇತ್ತು. ಮನೆ ನಂ.**223**/ಎಫ್ ಅದು ಮುಳುಗಡೆಯಾಗಿರುತ್ತದೆ. ಮೇಲೆ ಹೇಳಿದಂತ ಜಮೀನುಗಳು ಸಹ ಮುಳುಗಡೆಯಾಗಿವೆ ಎಂದರೆ ನಿಜ.

ಸದರಿ ಜಮೀನು ಮತ್ತು ಮನೆ ನಮ್ಮ ತಂದೆ ಜೀವಿತಾವಧಿಯಲ್ಲಿ ಅಂದರೆ **2000** ಇಸವಿಗಿಂತ ಪೂರ್ವದಲ್ಲಿ ಮುಳುಗಡೆಯಾಗಿರುತ್ತವೆ. ಸದರಿ ಸ್ವತ್ತುಗಳು ಮುಳುಗಡೆಯಾಗಿದ್ದಕ್ಕೆ ಮೊದಲ ಕಂತು ಅಂತ **1999-2000** ರಲ್ಲಿ **2** ಲಕ್ಷ ಹಣ ಬಂದಿರುತ್ತದೆ. ಹಾಗೂ **2012** ರಲ್ಲಿ ರೂ.**55,00,500/-** ಬಂದಿರುತ್ತದೆ. ಸದರಿ ಪರಿಹಾರಧನದಲ್ಲಿ ನಮಗೂ ಭಾಗ ನೀಡಿ ಅಂತ ನಮ್ಮ ತಂದೆ ವಿರುದ್ಧವಾಗಲಿ ನಮ್ಮ ತಾಯಿ ವಿರುದ್ಧವಾಗಲಿ ದಾವೆ ಸಲ್ಲಿಸಿಲ್ಲ. ನಮ್ಮ ತಂದೆ ಹಾಗೂ ತಾಯಿ ಮರಣಾ ನಂತರ ಯಾವುದೇ ದಾವೆ ಸಲ್ಲಿಸಿಲ್ಲ ಎಂದರೆ ಸಾಕ್ಷಿ ತಾಯಿ ಮರಣಾ ನಂತರ ಪ್ರಸ್ತುತ ದಾವೆ ಸಲ್ಲಿಸಿರುವುದಾಗಿ ನುಡಿಯುತ್ತಾರೆ.

ಈ ದಾವೆಯನ್ನು ನನ್ನ ಸಹೋದರಿಯ ಮಗನಾದ ವಿಜಯಕುಮಾರವರು ಅವರಿಗೂ ಆಸ್ತಿ ಬೇಕು ಅಂತ ಸಲ್ಲಿಸಿರುತ್ತಾರೆ.

ಮನೆ ನಂ.**233**/ಎಫ್ ರ ಸ್ವತ್ತು ಮುಳುಗಡೆ ಸಮಯದಲ್ಲಿ ನಮ್ಮ ತಾತನ

ಹೆಸರಿನಲ್ಲಿತ್ತು. ಪುನಃ ಸಾಕ್ಷಿ ನಮ್ಮ ತಂದೆ ಹೆಸರಿನಲ್ಲಿರಬಹುದು ಎಂದು ನುಡಿಯುತ್ತಾರೆ. ಸದರಿ ಸ್ವತ್ತು ಯಾರ ಹೆಸರಿನಲ್ಲಿತ್ತು ಎಂಬುದರ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ. ಸದರಿ ಮನೆ ನಂ.233/ಎಫ್ ರ ಆಸ್ತಿ ನಮ್ಮ ತಂದೆ ಅಥವಾ ತಾತನ ಹೆಸರಿನಲ್ಲಿರಲಿಲ್ಲ ಅದು ನಮ್ಮ ತಾಯಿ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ. ಸದರಿ ಜಮೀನುಗಳು ಸಹ ನಮ್ಮ ತಂದೆ ಹೆಸರಿನಲ್ಲಿರಲಿಲ್ಲ, ನಮ್ಮ ತಾಯಿ ಹೆಸರಿನಲ್ಲಿದ್ದವು ಎಂದರೆ ಸರಿಯಲ್ಲ,

ನಮ್ಮ ಕುಟುಂಬಕ್ಕೆ ಯಾವುದೇ ಪಿತ್ರಾರ್ಜಿತ ಸ್ವತ್ತುಗಳು ಇರಲಿಲ್ಲ, ಮೇಲೆ ಹೇಳಿದಂತ ಜಮೀನುಗಳು ಹಾಗೂ ಮನೆ ನಮ್ಮ ತಾಯಿಯ ಸ್ವಯಾರ್ಜಿತ ಸ್ವತ್ತುಗಳು ಎಂದರೆ ಸರಿಯಲ್ಲ.

ಮುರನಾಳ ಗ್ರಾಮದ ಸರ್ವೆ ನಂ. 130/1 ರ ಪ್ಲಾಟ ನಂ.47 ರ ಸ್ವತ್ತನ್ನು ನಮ್ಮ ತಂದೆ ಬಸಪ್ಪ ಹಕ್ಕಿರವರಿಂದ 1994 ರಲ್ಲಿ ಖರೀದಿ ಪಡೆದಿದ್ದರು ಎಂದರೆ ನಿಜ. ಸಾಕ್ಷಿ ಮುಂದುವರೆದ ಸದರಿ ಸ್ವತ್ತನ್ನು ನಮ್ಮ ತಂದೆ ಕುಟುಂಬದ ಜಮೀನುಗಳಿಂದ ಬಂದ ಆದಾಯದಿಂದ ಖರೀದಿ ಮಾಡಿರುವುದಾಗಿ ನುಡಿಯುತ್ತಾರೆ. ಕುಟುಂಬದ ಜಮೀನುಗಳಿಂದ ಎಷ್ಟು ಆದಾಯ ಬರುತ್ತಿತ್ತು, ಎಷ್ಟು ಖರ್ಚಾಗುತ್ತಿತ್ತು ಹಾಗೂ ಎಷ್ಟು ಉಳಿಯುತ್ತಿತು ಎಂಬುದು ನನಗೆ ಗೊತ್ತಿಲ್ಲ ಆದರೆ ನಮ್ಮ ತಾಯಿಗೆ ಗೊತ್ತು. ನಮ್ಮ ತಂದೆಯವರ ಮರಣಾ ನಂತರ ಮುರನಾಳ ಗ್ರಾಮದ ಪ್ಲಾಟ ನಂ.47 ರ ಸ್ವತ್ತಿಗೆ ನಮ್ಮ ತಾಯಿ, ನಮ್ಮ ಸಹೋದರ-ಸಹೋದರಿಯರು ಹಾಗೂ ನನ್ನ ಹೆಸರು ವಾರಸಾನಾತೆಯಿಂದ ದಾಖಲಾಗಿರುತ್ತದೆ ಎಂದರೆ ನಿಜ.

ವಾದಿಯ ತಾಯಿ ಹಾಗೂ ನನ್ನ ಸಹೋದರಿ ಶೈಲಾ 1985 ರಲ್ಲಿ ಮರಣ ಹೊಂದಿರುತ್ತಾರೆ ಎಂದರೆ ನಿಜ. ನಮ್ಮ ತಂದೆ ಮರಣ ಹೊಂದುವ ಪೂರ್ವದಲ್ಲಿ ಶೈಲಾ ಮೃತಪಟ್ಟಿದ್ದಳು ಎಂದರೆ ನಿಜ. ಶೈಲಾ ಮರಣ ಹೊಂದುವ ಪೂರ್ವದಲ್ಲಿ ನಮ್ಮ ಕುಟುಂಬಕ್ಕೆ ಯಾವುದೇ ಆಸ್ತಿಗಳು ಇರಲಿಲ್ಲ ಎಂದರೆ ಸರಿಯಲ್ಲ. ಶೈಲಾರವರ ಮರಣಾ ನಂತರ ನಮ್ಮ ತಂದೆ ನಿವೇಶನ ನಂ.47 ನ್ನು ಖರೀದಿ ಮಾಡಿರುತ್ತಾರೆ

ಎಂದರೆ ನಿಜ. ಶೈಲಾರವರ ಮರಣಾ ನಂತರ ದಾವಾ ಸ್ವತ್ತುಗಳನ್ನು ಖರೀದಿ ಮಾಡಿದ್ದರಿಂದ ಶೈಲಾರವರಿಗೆ ಸದರಿ ಸ್ವತ್ತುಗಳಲ್ಲಿ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ವಾದಿ ಶೈಲಾರವರ ಮಗನಾದ ಕಾರಣ ಅವರಿಗೂ ಸಹ ದಾವಾ ಸ್ವತ್ತುಗಳಲ್ಲಿ ಹಕ್ಕು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ.

ನಿವೇಶನ ನಂ.47 ರಲ್ಲಿ ನಮ್ಮ ತಂದೆ ಮನೆ ಕಟ್ಟಿಸಿದ್ದರು ಎಂದರೆ ಸಾಕ್ಷಿ ಮೊದಲ ಕಂತಿನ ಪರಿಹಾರಧನದಿಂದ ಬಂದಂತ 2 ಲಕ್ಷ ಹಣದಿಂದ ಮನೆ ಕಟ್ಟಿಸಿದ್ದರು ಎಂದು ನುಡಿಯುತ್ತಾರೆ. 7 ಮತ್ತು 9 ನೇ ಪ್ರತಿವಾದಿಗಳು ತನ್ನ ಸ್ವಂತ ಗಳಿಕೆಯಿಂದ ಹಾಗೂ ಸೋದರಮಾವನಿಂದ ಹಣ ಪಡೆದು ಮನೆ ಹಾಗೂ ಅಂಗಡಿ ಕಟ್ಟಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪರಿಹಾರಧನದ 2 ನೇ ಕಂತು 55 ಲಕ್ಷ ಬಂದ ನಂತರ 4 ಮನೆ ಹಾಗೂ 10 ಅಂಗಡಿಗಳನ್ನು ನಾವು ಕಟ್ಟಿಸಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಪರಿಹಾರಧನದ 2 ನೇ ಕಂತು 55 ಲಕ್ಷ ಬಂದ ನಂತರ 4 ಮನೆ ಹಾಗೂ 10 ಅಂಗಡಿಗಳನ್ನು ನಾವು ಕಟ್ಟಿಸಿರುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ 4 ಮನೆ ಹಾಗೂ 10 ಅಂಗಡಿಗಳನ್ನು ಕಟ್ಟಿಸುವ ಸಮಯದಲ್ಲಿ ಯಾವುದೇ ಪರಿಹಾರಧನದ ಹಣ ಬಂದಿರಲಿಲ್ಲ ಎಂದರೆ ಸರಿಯಲ್ಲ.

ಹಳೆ ಬಾಗಲಕೋಟೆಯಲ್ಲಿರುವ 223/ಎಫ್ ರ ಮನೆ ಮುಳುಗಡೆಯಾಗಿದ್ದಕ್ಕೆ ಸರಕಾರದವರು ನವನಗರದಲ್ಲಿ ನಮ್ಮ ತಾಯಿ ಹೆಸರಿನಲ್ಲಿ ಒಂದು ಮನೆ ನೀಡಿದ್ದರು ಎಂದರೆ ನಿಜ. ಸದರಿ ನಿವೇಶನದಲ್ಲಿ ಪಾಲು ವಿಭಾಗಕ್ಕೆ ಸಂಬಂದಿಸಿದಂತ ನಮ್ಮ ಸಹೋದರರ ನಡುವೆ ಅಸಲು ದಾವಾ ನಂ. 237/2021 ರಂತೆ ದಾವೆ ನಡೆದಿತ್ತು ಎಂದರೆ ಸರಿಯಲ್ಲ. ಸದರಿ ದಾವೆಯನ್ನು ಪ್ರಸ್ತುತ 9 ನೇ ಪ್ರತಿವಾದಿ ಮಲ್ಲಿಕಾರ್ಜುನ ಸಲ್ಲಿಸಿದ್ದ ಎಂದರೆ ಸರಿಯಲ್ಲ. ನಾವೆಲ್ಲ ಸಹೋದರಿಯರು ಸೇರಿ ರಾಜೀ ಮಾಡಿಕೊಂಡು ದಿಃ 18.12.2021 ರಂದು ಸ್ವತ್ತುಗಳಲ್ಲಿನ ಹಕ್ಕನ್ನು ತಲಾ 2 ಲಕ್ಷ ಹಣ ಪಡೆದುಕೊಂಡು ನಮ್ಮ ತಾಯಿ ಹಾಗೂ ಇಬ್ಬರು ಸಹೋದರರಿಗೆ

ಬಿಟ್ಟುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಸ್ವತ್ತಿನಲ್ಲಿ ನಮ್ಮ ತಾಯಿ ಹಾಗೂ ಇಬ್ಬರು ಸಹೋದರರಿಗೆ ಸಮನಾದ ಹಕ್ಕು ಇತ್ತು ಎಂದರೆ ಸಾಕ್ಷಿ ಹೆಣ್ಣುಮಕ್ಕಳಿಗೂ ಸಹ ಸಮನಾದ ಹಕ್ಕು ಇತ್ತು ಎಂದು ನುಡಿಯುತ್ತಾರೆ.

ನಮ್ಮ ತಾಯಿ ನವನಗರದಲ್ಲಿರುವ ನಿವೇಶನದಲ್ಲಿನ ತನ್ನ 1/3 ಹಕ್ಕನ್ನು ತನ್ನ ಗಂಡುಮಕ್ಕಳಿಗೆ ಹೋಗಬೇಕು ಅಂತ ಹೇಳಿ ದಿಃ 11.05.2022 ರಂದು ಮೃತ್ಯುಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮೃತ್ಯುಪತ್ರದ ಪ್ರಕಾರ ನವನಗರದಲ್ಲಿರುವ ನಿವೇಶನಕ್ಕೆ ನನ್ನ ಇಬ್ಬರು ಸಹೋದರರು ಮಾಲೀಕರಾಗಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮೃತ್ಯುಪತ್ರಕ್ಕೆ ಸಂಬಂದಿಸಿದಂತೆ ನಮ್ಮ ಇಬ್ಬರು ಸಹೋದರರು ಇಬ್ಬರು ಸಹೋದರಿಯರೊಂದಿಗೆ ಚರ್ಚೆ ಮಾಡಿದ್ದರು ಎಂದರೆ ಸರಿಯಲ್ಲ. ಆಗ ನಾವು ತಕರಾರು ಮಾಡಿ ನಮ್ಮ ಸಹೋದರಿಯ ಮಗನಾದ ವಿಜಯಕುಮಾರನ ಮೂಲಕ ಈ ಪ್ರಸ್ತುತ ದಾವೆ ಸಲ್ಲಿಸುವಂತೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನೋಟಿಸ ಬಂದ ನಂತರ ವಿಜಯಕುಮಾರ ದಾವೆ ಸಲ್ಲಿಸಿದ ವಿಚಾರ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ.

ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ 4 ಮನೆ ಹಾಗೂ 10 ಅಂಗಡಿಗಳನ್ನು ಬಾಡಿಗೆ ನಾವೆಲ್ಲರೂ ಸೇರಿ ನೀಡಿದ್ದು ಬಾಡಿಗೆ ಹಣವನ್ನು ಹಂಚಿಕೊಳ್ಳುತ್ತಿದ್ದೆವು ಎಂದು ಹೇಳುತ್ತಿದ್ದು, ಎಷ್ಟು ಬಾಡಿಗೆ ಹಣ ಬರುತ್ತಿತ್ತು ಎಂದರೆ ಸಾಕ್ಷಿ 1 ಲಕ್ಷ ಬಾಡಿಗೆ ಬರುತ್ತಿತ್ತು, ಆದರೆ ಎಷ್ಟು ಖರ್ಚಾಗುತ್ತಿತ್ತು ಎನ್ನುವುದು ನಮ್ಮ ತಾಯಿಗೆ ಗೊತ್ತು ಎಂದು ನುಡಿಯುತ್ತಾರೆ. ಅಂಗಡಿ ಹಾಗೂ ಮನೆಗಳನ್ನು ಯಾರಿಗೆ ಬಾಡಿಗೆ ನೀಡಿದ್ದರೂ ಹಾಗೂ ಎಷ್ಟು ಹಣಕ್ಕೆ ಬಾಡಿಗೆ ನೀಡಿದ್ದರು ಎಂದರೆ ಸಾಕ್ಷಿ 1 ಅಂಗಡಿಯನ್ನು ಬ್ಯೂಟಿ ಪಾರ್ಲರಗೆ, 1 ಜ್ಯೋತಿಷ್ಯಾಲಯಕ್ಕೆ, 1 ರಕ್ತ ತಪಾಸಣಾ ಕೇಂದ್ರಕ್ಕೆ, 1 ಬಟ್ಟೆ ಇಸ್ತ್ರಿಅಂಗಡಿ, 1 ಬಸವೇಶ್ವರ ಬ್ಯಾಂಕ, 1 ಫೋನ್ ಅಂಗಡಿ, 1 ಟ್ರಾವೆಲ್ಸ ಹಾಗೂ ಇನ್ನುಳಿದ 3 ಅಂಗಡಿಗಳು ಯಾತಕ್ಕೆ ನೀಡಿದ್ದರು ಎನ್ನುವುದು ನೆನಪಿಲ್ಲ. ಸದರಿ ಮನೆ ಹಾಗೂ ಅಂಗಡಿಗಳಿಂದ 1 ಲಕ್ಷ ಬಾಡಿಗೆ ಬರುತ್ತಿತ್ತು ಹಾಗೂ

ನಮಗೆ ಹಂಚಿಕೆ ಮಾಡಿ ನೀಡುತ್ತಿದ್ದರು ಅಂತ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ಮನೆತನದ ಎಲ್ಲ ವ್ಯವಹಾರಗಳನ್ನು ನಮ್ಮ ತಾಯಿ ನೋಡಿಕೊಳುತ್ತಿದ್ದರು ಎಂದರೆ ನಿಜ. ಪುನಃ ಸಾಕ್ಷಿ ದುಡ್ಡಿನ ವ್ಯವಹಾರ ನಮ್ಮ ತಾಯಿ ನೋಡಿಕೊಳ್ಳುತ್ತಿದ್ದರು, ಮನೆಗೆ ಬೇಕಾದ ಸಾಮಾನುಗಳನ್ನು ತರುವುದು ನಾವು ಮಾಡುತ್ತಿದ್ದೆವು ಎಂದು ನುಡಿಯುತ್ತಾರೆ. ಮನೆಗೆ ಬೇಕಾದ ಸಾಮಾನುಗಳನ್ನು ನಾವು ತರುತ್ತಿದ್ದೆವು ಅಂತ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ತಾಯಿ ಆರೋಗ್ಯ ಸರಿ ಇರಲಿಲ್ಲ, ಅವರಿಗೆ ಕಣ್ಣು ಕಾಣುತ್ತಿರಲಿಲ್ಲ, ಕಿವಿ ಕೇಳುತ್ತಿರಲಿಲ್ಲ ಅಂತ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಾಯಿ ಮಾನಸಿಕ ಹಾಗೂ ದೈಹಿಕ ಸ್ವಾಸ್ಥ ಚೆನ್ನಾಗಿತ್ತು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ನಮ್ಮ ತಾಯಿಗೆ ರಕ್ತದೊತ್ತಡ, ಸಕ್ಕರೆ ಕಾಯಿಲೆ, ಕ್ಯಾನ್ಸರ ಮತ್ತು ಕಿಡ್ನಿ ಕಾಯಿಲೆ ಇತ್ತು ಆದ್ದರಿಂದ ಅವರಿಗೆ ನಡೆದಾಡಲು ಆಗುತ್ತಿರಲಿಲ್ಲ ಎಂದು ನುಡಿಯುತ್ತಾರೆ. ನಮ್ಮ ತಾಯಿ ಸದರಿ ಕಾಯಿಲೆಗಳಿಗೆ ಸಂಬಂದಿಸಿದಂತೆ ಆಯುರ್ವೇದಿಕ ಚಿಕಿತ್ಸೆಗಾಗಿ ಹನಮಂತ ಮಳಲಿರವರ ಬಳಿ ಹಾಗೂ ಕ್ಯಾನ್ಸರ ಚಿಕಿತ್ಸೆಗಾಗಿ ಆಶೀರ್ವಾದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ನಮ್ಮ ತಾಯಿಗೆ ಕ್ಯಾನ್ಸರ ಕಾಯಿಲೆ ಹೊರತುಪಡಿಸಿ ಬೇರೆ ಯಾವುದೇ ಕಾಯಿಲೆ ಇರಲಿಲ್ಲ ಎಂದರೆ ಸರಿಯಲ್ಲ.

ನಮ್ಮ ತಾಯಿಗೆ ರಕ್ತದೊತ್ತಡ, ಸಕ್ಕರೆ ಕಾಯಿಲೆ, ಕಿಡ್ನಿ ಕಾಯಿಲೆ, ಕಣ್ಣು ಕಾಣುತ್ತಿರಲಿಲ್ಲ, ಕಿವಿ ಕೇಳುತ್ತಿರಲಿಲ್ಲ ಅಂತ ತೋರಿಸಲು ದಾಖಲೆಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ.

ನಮ್ಮ ತಾಯಿ ಆರೋಗ್ಯವಾಗಿದ್ದು ಅವರ ಒಳ್ಳೆಯ ಮನಸ್ಥಿತಿಯಲ್ಲೆ ನಮ್ಮ ಸಹೋದರರಿಗೆ ಮೃತ್ಯುಪತ್ರ ಬರೆದುಕೊಟ್ಟಿದ್ದು, ಸದರಿ ಮೃತ್ಯುಪತ್ರವನ್ನು ಅಲ್ಲಗಳೆಯಲು ನಮ್ಮ ತಾಯಿಗೆ ಮೇಲೆ ಹೇಳಿದ ಕಾಯಿಲೆಗಳು ಇದ್ದವು ಅಂತ

ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಸ್ವತ್ತುಗಳಲ್ಲಿನ ನಮ್ಮ ಹಕ್ಕುಗಳನ್ನು ನಾವು ಅಸಲು ದಾವಾ ನಂ. 237/2021 ರ ದಾವೆಯಲ್ಲಿ ನಮ್ಮ ಸಹೋದರರಿಗೆ ಬಿಟ್ಟುಕೊಟ್ಟ ಕಾರಣ ದಾವಾ ಸ್ವತ್ತುಗಳಲ್ಲಿ ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ಅಸಲು ದಾವಾ ನಂ. 237/2021 ರಲ್ಲಿ ಆದಂತ ರಾಜೀ ಡಿಕ್ರಿಯನ್ನು ಪ್ರಶ್ನಿಸಿ ಬೇರೆ ದಾವೆಯನ್ನಾಗಲಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನಾಗಲಿ ಸಲ್ಲಿಸಿಲ್ಲ ಎಂದರೆ ನಿಜ.

ನಮ್ಮ ಸಹೋದರಿಯ ಮಗನ ಮೂಲಕ ಪ್ರಸ್ತುತ ದಾವೆ ಸಲಿಸುವಂತೆ ಮಾಡಿ ಸುಳ್ಳು ಸಂಗತಿಗಳನ್ನು ಸೃಷ್ಟಿಸಿಕೊಂಡು ಪ್ರತಿ ಮಾಗಣಿ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2 ನೇ ಕಂತಿನ ಪರಿಹಾರಧನವಾದ 55 ಲಕ್ಷ ಹಣವನ್ನು ನಮ್ಮ ತಾಯಿಯವರು ಪಡೆದುಕೊಂಡಿದ್ದರು. ನಮ್ಮ ತಾಯಿ ಸದರಿ ಹಣ ಪಡೆದುಕೊಂಡ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಸದರಿ 4 ಮನೆ ಹಾಗೂ 10 ಅಂಗಡಿಗಳನ್ನು 2012-13 ನೇ ಸಾಲಿನಲ್ಲಿ ಕಟ್ಟಿಸಿರುತ್ತಾರೆ. ಸದರಿ ಮನೆ, ಅಂಗಡಿ ಕಟ್ಟಿಸಲು ಎಷ್ಟು ಹಣ ಖರ್ಚಾಗಿರುತ್ತದೆ ಹಾಗೂ ಪರಿಹಾರಧನದಲ್ಲಿನ ಹಣ ಎಷ್ಟು ಉಳಿದುಕೊಂಡಿದೆ ಎಂದರೆ ಸಾಕ್ಷಿ ಪರಿಹಾರಧನಕ್ಕಿಂತ ಹೆಚ್ಚಿನ ಹಣ ಖರ್ಚಾಗಿರುತ್ತದೆ ಎಂದು ನುಡಿಯುತ್ತಾರೆ. ಹೆಚ್ಚಿಗೆ ಹಣವನ್ನು ನಾನು ಮತ್ತು ನನ್ನ ಸಹೋದರಿ ಕಸ್ತೂರಿಬಾಯಿರವರು ಹೊಂದಿಸಿರುತ್ತೇವೆ. ನಾನು 12 ರಿಂದ 25 ಸಾವಿರ, ಹಾಗೂ ನಮ್ಮ ಸಹೋದರಿ ಕಸ್ತೂರಿಬಾಯಿ ಎಷ್ಟು ನೀಡಿರುತ್ತಾರೆ ಎಂದು ಗೊತ್ತಿಲ್ಲ.

ಸದರಿ 4 ಅಂಗಡಿ ಹಾಗೂ 10 ಮನೆಗಳನ್ನು ಕಟ್ಟಲು ಹಣವನ್ನು ಧಾರವಾಡದಲ್ಲಿದ್ದ ನಿವೃತ್ತ ತಹಶೀಲ್ದಾರನಾದ ನಮ್ಮ ಸಂಬಂದಿಕರಾದ ಭದ್ರಪ್ಪ ಹಕ್ಕಿರವರು ಹಣ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಮತು ಸಹೋದರಿ ಕಸ್ತೂರಿ ಅಂಗಡಿ ಮನೆ ಕಟ್ಟಲು ಹಣ ನೀಡಿದ್ದೇವೆ ಅಂತ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ

**OS No**.300/2022

**DW**–4 (**ಮಾಲತಿ ಮುಚಖಂಡಿ**)

ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ.

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆಎಂಎಫ್‌ಸಿ,ಬಾಗಲಕೋಟೆ.